# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹುಬ್ಬಳ್ಳಿಯಲ್ಲಿ VLSI ಇನ್ಕ್ಯುಬೇಷನ್ ಸೌಲಭ್ಯದ ಸ್ಥಾಪನೆ.

ಓದಲಾಗಿದೆ: 1. ದಿನಾಂಕ 09.05.2017, ಸಂಖ್ಯೆ ಐಟಿಡಿ 77 ಎಡಿಎಂ 2017ರ ಸರ್ಕಾರಿ ಆದೇಶ.

2. ದಿನಾಂಕ 15.06.2017, ಸಂಖ್ಯೆ ಐಟಿಬಿಟಿ / ಆಡಳಿತ/34/ ಆಯವ್ಯಯದ ಮಾತಂ ಜೈತಂ ನಿರ್ದೇಶಕರು ಪತ್ರ.

ಪ್ರಸ್ತಾವನೆ:

ಹುಬ್ಬಳ್ಳಿಯಲ್ಲಿ VLSI ಇನ್ಕ್ಯುಬೇಷನ್ ಸೌಲಭ್ಯವನ್ನು ಸ್ಥಾಪಿಸಲಾಗುವುದೆಂದು 2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದ್ದು, ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಹುಬ್ಬಳ್ಳಿಯ ಭೂಮರೆಡ್ಡಿ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಯವರು VLSI ಇನ್ಕ್ಯುಬೇಷನ್ ಸೌಲಭ್ಯದ ಸ್ಥಾಪನೆಗಾಗಿ ಉಚಿತವಾಗಿ ಜಾಗವನ್ನು ಒದಗಿಸಲು ಮುಂದೆ ಬಂದಿರುತ್ತಾರೆ ಎಂದು ತಿಳಿಸಿರುತ್ತಾರೆ. ಇಂಡಿಯಾ ಇಲೆಕ್ಟ್ರಾನಿಕ್ಸ್ ಅಂಡ್ ಸೆಮಿಕಂಡಕ್ಟರ್ ಅಸೋಸಿಯೇಷನ್ (IESA)ರವರು ಒಟ್ಟು 100 ರಿಂದ 150 ಕೊಠಡಿಗಳುಳ್ಳ ಅಂದಾಜು 40 ಸುಸಜ್ಜಿತ ವರ್ಕ್ ಸ್ಟೇಷನ್‌ಗಳಿರುವ ಸದರಿ ಸೌಲಭ್ಯವನ್ನು ಚಾಲನೆ ಮಾಡಿ ನಿರ್ವಹಿಸಲು ಮುಂದೆ ಬಂದಿರುತ್ತಾರೆ ಎಂದು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶಕರು ತಿಳಿಸಿರುತ್ತಾರೆ.

3. ಒಳಾಂಗಣ ಸಜ್ಜಿಕೆ, ಅಂತರ್ಜಾಲ, ಸರ್ವರ್‌ಗಳು, ಉಪಕರಣಗಳು, ವೈ-ಫೈ, ವಿದ್ಯುಚ್ಛಕ್ತಿ ಬೆಂಬಲ, ಹವಾನಿಯಂತ್ರಣ, ಗಣಕಯಂತ್ರಗಳು, ಜಾಲಸಂಪರ್ಕಗಳು, ಮುಂತಾದ ಅಗತ್ಯ ಮೂಲಸೌಕರ್ಯಗಳು ಒದಗಿಸಲ್ಪಟ್ಟ ನಂತರ ಸದರಿ ಇನ್ಕ್ಯುಬೇಷನ್ ಸೌಲಭ್ಯವು ಸೆಪ್ಟೆಂಬರ್ 2017ರೊಳಗಾಗಿ ಸಜ್ಜುಗೊಂಡು ಕಾರ್ಯ ನಿರ್ವಹಿಸಲಿದೆ. ಇದಕ್ಕಾಗಿ ಬಂಡವಾಳ ವೆಚ್ಚವು ಅಂದಾಜು ರೂ.400 ಲಕ್ಷಗಳಾಗಿದ್ದು, ಮೊದಲ ವರ್ಷಕ್ಕೆ ಚಾಲನಾ ವೆಚ್ಚವು ರೂ.25 ಲಕ್ಷಗಳಾಗುವುದೆಂದು ಅಂದಾಜಿಸಲಾಗಿದೆ.

4. ಹುಬ್ಬಳ್ಳಿಯಲ್ಲಿ ಸದರಿ VLSI ಇನ್ಕ್ಯುಬೇಷನ್ ಸೌಲಭ್ಯದ ಸ್ಥಾಪಿಸುವ ಉದ್ದೇಶಕ್ಕಾಗಿ 2017-18ನೇ ಸಾಲಿನಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಆಯವ್ಯಯದಲ್ಲಿ ರೂ.4.00 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ.

5. ಹುಬ್ಬಳ್ಳಿಯು ಉತ್ತರ ಕರ್ನಾಟಕದ 2ನೇ ಹಂತದ ಪ್ರಮುಖ ವಾಣಿಜ್ಯ ನಗರವಾಗಿದ್ದು, ಉತ್ತರ ಕರ್ನಾಟಕ ಪ್ರದೇಶದಲ್ಲಿ ನವೀನ ಪರಿಕಲ್ಪನೆಗಳನ್ನು ಮತ್ತು ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ರಾಜ್ಯ ಸರ್ಕಾರದ ಉದ್ದೇಶಕ್ಕೆ ಇ.ಎಸ್.ಡಿ.ಎಂ. ಸ್ಟಾರ್ಟ್‌ಅಪ್‌ಗಳನ್ನು ಪ್ರೋತ್ಸಾಹಿಸುವ ಕಾರ್ಯವು ಸಮರ್ಪಕವಾಗಿ ಹೊಂದುತ್ತದೆ.

6. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ.

## ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 147 ಎಡಿಎಂ 2017, ಬೆಂಗಳೂರು, ದಿನಾಂಕ 04.07.2017

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2017-18ನೇ ಸಾಲಿನಿಂದ ಹುಬ್ಬಳ್ಳಿಯ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ VLSI ಇನ್ಕ್ಯುಬೇಷನ್ ಸೌಲಭ್ಯ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ.

--2

2. ಸದರಿ ಸೌಲಭ್ಯದ ಬಂಡವಾಳ ವೆಚ್ಚಕ್ಕಾಗಿ ರೂ.400.00 ಲಕ್ಷಗಳ ಅಂದಾಜು ವೆಚ್ಚವನ್ನು ಹಾಗೂ ಮೊದಲ ವರ್ಷದ ಚಾಲನಾ ವೆಚ್ಚಕ್ಕಾಗಿ ರೂ.25.00 ಲಕ್ಷಗಳನ್ನು ಇ.ಎಸ್.ಡಿ.ಎಂ. ವಲಯವನ್ನು ಪ್ರೋತ್ಸಾಹಿಸುವ ಸಲುವಾಗಿ ಸರ್ಕಾರದದಿಂದ ಕೆಬಿಟ್ಸ್ ಸಂಸ್ಥೆಗೆ ನೀಡಲಾಗುವ ಅನುದಾನದಿಂದ ಭರಿಸತಕ್ಕದ್ದು.

3. ಸದರಿ ಸೌಲಭ್ಯವನ್ನು ಸ್ಥಾಪನೆ ಮಾಡಿ ಚಾಲನೆಗೊಳಿಸಲು IESA ಹಾಗೂ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜಿನೊಂದಿಗೆ ಕೆಬಿಟ್ಸ್ ಸಂಸ್ಥೆಯು ಪ್ರತಿಯೊಬ್ಬ ಪಾಲುದಾರರ ನಿರ್ದಿಷ್ಟ ಪಾತ್ರಗಳನ್ನು ಹೊಣೆಗಾರಿಕೆಗಳನ್ನು ನಿಗದಿಪಡಿಸಿರುವ ಒಪ್ಪಂದಕ್ಕೆ (ಎಂ.ಓ.ಎ) ಬರತಕ್ಕದ್ದು. ಸದರಿ ಸೌಲಭ್ಯದಿಂದ ಉತ್ಪತ್ತಿಯಾಗುವ ಆದಾಯದಿಂದ, ಪಾವತಿಸಿ ಬಳಸುವ (ಪೇ ಅಂಡ್ ಯ್ಯೂಸ್) ಆಧಾರದ ಮೇಲೆ ಎರಡನೇ ವರ್ಷದ ಹಾಗೂ ನಂತರದ ವರ್ಷಗಳ ಚಾಲನಾ ವೆಚ್ಚವನ್ನು IESA ಭರಿಸತಕ್ಕದ್ದು. ಸದರಿ ಸೌಲಭ್ಯವನ್ನು ಸಫಲವಾಗಿ ಚಾಲನೆ ಮಾಡಿ ನಿರ್ವಹಿಸುವಲ್ಲಿ IESAಯೊಡನೆ ಕೆಬಿಟ್ಸ್ ಸಂಸ್ಥೆಯು ಸಕ್ರಿಯವಾಗಿ ತೊಡಗಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

4/7

(ಸಿದ್ರಾಮಪ್ಪ ಹ. ತಳವಾರ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಗೆ:
ಸಂಕಲನಕಾರರು, ಕರ್ನಾಟಕ ವಾರ್ತಾಪತ್ರದ ವಿಶೇಷ ಗೆಜೆಟ್‌ನಲ್ಲಿ ಪ್ರಕಟಣೆಗಾಗಿ ಹಾಗೂ 200 ಪ್ರತಿಗಳ ಸರಬರಾಜು ಕೋರಿ.

ಪ್ರತಿಗಳು:
1) ಪ್ರಧಾನ ಲೇಖಪಾಲರು, ಕರ್ನಾಟಕ (ಎ&ಎ), ಬೆಂಗಳೂರು.
2) ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗು ಅಭಿವೃದ್ಧಿ ಆಯುಕ್ತರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ.
6) ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್, ಬೆಂಗಳೂರು.
7) ನಿರ್ದೇಶಕರು- ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಬೆಂಗಳೂರು.
8) ಅಧ್ಯಕ್ಷರು, IESA, ಬೆಂಗಳೂರು (ಕೆಬಿಟ್ಸ್ ಸಂಸ್ಥೆಯ ಮುಖಾಂತರ).
9) ಬಿ.ವಿ.ಬಿ. ಕಾಲೇಜ್ ಆಫ್ ಇಂಜಿನಿಯರಿಂಗ್, ಹುಬ್ಬಳ್ಳಿ.
10) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಬೆಂಗಳೂರು
11) ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ.
12) ರಕ್ಷಾ ಕಡತ/ ಬಿಡಿ ಪ್ರತಿಗಳು .